ಕಾಮಾ ಇತ್ತು, ಫುಲ್‌ಸ್ಟಾಪ್ ಇರಲಿಲ್ಲ. ರಾಮಗೊಂಡ, ಸುನೀತಾ ಸುಸ್ತಾಗಿದ್ದರು. ಮಗಳ ಕಾಳಜಿ ಜೀವ ಹಿಂಡುತ್ತಿತ್ತು. ರಾಮಗೊಂಡ ತನ್ನ ಹದಿಹರೆಯದಲ್ಲಿ ಬಂದ ಕಾಮಾಲೆಯನ್ನು ಜ್ಞಾಪಿಸಿಕೊಂಡ. ಬೆಲ್ಲ, ಕಬ್ಬಿನ ಹಾಲು ಮತ್ತು ಅನ್ನ- ಬೇಳೆ ಸೇವಿಸಿ, ವೈದ್ಯರು ನೀಡಿದ ಒಂದೇ ಒಂದು ಗುಳಿಗೆಯ ಕೋರ್ಸ್‌ನಲ್ಲಿ ಗುಣವಾಗಿದ್ದ. ಹಾಗೆ ಅನೇಕರು ಗುಣವಾಗುತ್ತಿದ್ದ ಕಾಲವದು. ಇದನ್ನು ಆತ ಒಮ್ಮೆ ಸಾಖರೆಯವರಿಗೆ ಕೇಳಿದ್ದ. ಅವನಿಗೆ ಸ್ವಂತಕ್ಕೆ ಸಮಾಧಾನ ತಂದುಕೊಳ್ಳುವುದಿತ್ತು ಕೂಡ.

'ಸರ, ನಮ್ಮ ನಿಮ್ಮ ಜಮಾನಾ ಬ್ಯಾರೆ... ಈಗಿನ ಹುಡುಗರದ್ದು ಬ್ಯಾರೆ... ನಾವ್ ಕಲ್ಲು ಮಣ್ಣುಗಳೊಳಗ ಆಡತಿದ್ವಿ... ಗಿಡಮರಗಳಲ್ಲಿ ಮಂಗ್ಯಾನಂಗ ಜಿಗಿದ್ಯಾಡತಿದ್ವಿ... ಹಂಗ ನಾವ ಜವಾರಿ ಕಾಳ ಕಡಿ, ಹಾಲ ಹೈನುಂಡ ಬೆಳೆದವರರೆಪ್ಪ... ಈಗಿನವರು ಪಾಕೀಟ ಹಾಲು ಮೊಸರು ಮತ್ತ ಜಂಕ್ ಫುಡ್ ತಿನ್ನೋವು! ಕಲ್ಲ ಮಣ್ಣೊಳಗ ಆಡೋ ಮಾತ ದೂರನ... ಮತ್ತ ಈ ಅತೀ ಹೈಜೆನಿಕ್! ಭಾಳ ಫರಕದ" ಅಂತಂದಿದ್ದರು ಡಾ. ಸಾಖರೆ.

ಹಾಗಾದರೆ ಹೈಜನಿಕ್ ಆಗಿರೋದು ತಪ್ಪೇನು? ಎಂಬ ಪ್ರಶ್ನೆ ರಾಮಗೊಂಡನನ್ನು ಕಾಡತೊಡಗಿತು. ತಾವೆಲ್ಲ ಹೀಗೆ ಇರಲೇಇಲ್ಲ. ಚಿಕ್ಕ ಹುಡುಗನಿದ್ದಾಗ ಗುಡಿಯ ಕುಂಬಿಗಳು, ಪೌಳಿಯ ಮೇಲ್ಛಾವಣಿಯ ಪತ್ರೆ ಮೇಲೆ ಓಡಾಟ. ಚಾಪಿ ಹೂವಿನ ಗಿಡ ಏರಿ ಹೂ ಕೀಳೋದು. ನರಸಿಂಹನ ಪುಟ್ಟ ಗುಡಿ ಮೇಲಿಂದ ಒಣ ಕಬ್ಬು ರವದಿ ಹೊಂದಿದ ತಿಪ್ಪೆಯಲ್ಲಿ ಜಿಗಿಯೋದು. ಆಗ ಉಂಟಾದ ಉಂಡಾಡಿಗಳ ಗದ್ದಲಕ್ಕೆ ಮುಖ್ಯ ದೈವದ ಉಸಾಬರಿ ಮಾಡುವ ರುದ್ರ ಜೋರಾಗಿ ಕೂಗಿ ಬೈಯುತ್ತಾ ಬರುತ್ತಿದ್ದ- 'ಯೇಯ್ ಸುಕ್ಕಾಳಿ ಮಕ್ಕಳ್ರ್ಯಾ... ನಿಮ್ಮೌನ ದ್ಯಾವರ ಮದಿನಕ ಮಲಕೊಂಡಾನ್ರಲೇ... ಮಂಗ್ಯಾನ ಮಕ್ಕಳ್ರಾ... ಹೊರಡ್ರಿ ನೋಡೋಣ...' ಎಂದು ಕುಂಟುತ್ತಾ ಕೋಲು ನೆಲಕ್ಕೆ ಕುಟುಕುತ್ತಾ ಬರುತ್ತಿದ್ದ. ನಿಜ. ತಾವೆಲ್ಲ ಪುಟ್ಟ ಉಂಡಾಡಿಗಳು. ಕಿಕ್ಕಿಕ್ಕಿ ಹಲ್ಲುಕಿಸಿಯುತ್ತ ಓಡಿ ಹೋಗುತ್ತಿದ್ದೆವು. 'ಖರೇ ಅರ್ಥದಲ್ಲಿ ತಾವೆಲ್ಲ ಆಗಿನ ಹುಡುಗರು 'ಮಂಗ್ಯಾ ಸೂಳೆಮಕ್ಕಳೇ!' ರಾಮಗೊಂಡನಿಗೆ ಗತ ಹುಡುಗಾಟಿಕೆಗಳು ಫಳ್ಳನೆ ಹೊಳೆದವು.



ಬಿಲ್‌ರುಬಿನ್ ಎಂಬ ಹಳದಿಯನ್ನು ತ್ಯಜಿಸಿ ಪ್ರವಿಸುವ ಅಂಕಿ ಏರು ಸಂಖ್ಯೆಯಲ್ಲಿತ್ತು. ಅದು ನಾರ್ಮಲ್‌ಗೆ ಬರಬೇಕಿತ್ತು. ಆ ಸಂಖ್ಯೆಯನ್ನು ನೋಡಲು ಅವರ ಕಣ್ಣುಗಳು ಕಾತುರವಾಗಿದ್ದವು. ರಾಮಗೊಂಡ ಮತ್ತು ಸುನೀತಾ ಹಳ್ಳಿಗೆ ಮನೆತನದ ದೈವ ಕಾರ್ಯಕ್ಕೆ ಹೋಗಲೇಬೇಕಿತ್ತು. ಅದು ಅವರಿಗೆ ಎರಡು ಕಾರಣಗಳಿಂದ ಮಹತ್ವದ್ದು. ಒಂದು, ದೈವದ ಸೇವೆ. ಅದು ಪ್ರತಿ ಮೂರು ವರ್ಷಕ್ಕೆ ಅವರ ಪಾಲಿಗೆ ಬರುತ್ತಿತ್ತು. ಎರಡು, ದೈವ ಸೇವೆಯ ಒಂದು ಮಾಸದಲ್ಲಿ ದೊಡ್ಡ ಪ್ರಮಾಣದ ಹಣ ಮತ್ತು ದವಸ ಧಾನ್ಯ ಇತ್ಯಾದಿ ಭಕ್ತರಿಂದ ದೊರೆಯುವ ಅವಕಾಶ. ಅದನ್ನು ಕಳೆದುಕೊಳ್ಳುವುದು ಹೇಗೆ? ಅದು ಮನೆತನದ ಹಕ್ಕಿನದ್ದು. ಹೀಗಾಗಿ ಬಿಡುವ ಪ್ರಶ್ನೆಯೇ ಗೊಂದಲದ್ದು. ಹೀಗಾಗಿ ರಾಮಗೊಂಡ ಸುನೀತಾ ದೈವ ಸೇವೆಗೆ ಹೋಗಲೇಬೇಕು ಎಂಬುದನ್ನು ಠರಾಯಿಸಿದರು. ದೈವನು ತಮಗೆ ಸತ್ವ ಪರೀಕ್ಷೆಗೆ ಒಡ್ಡಿರುವನು. ಹೀಗೆಂದು ಭಾವಿಸಿದರು. ಅವನಿಗೆ ಕಾಯಿ, ಕರ್ಪೂರ, ಮಡಿಯುಟ್ಟು ನೈವೇದ್ಯ ಪೂರೈಸಿ 'ಮಗಳನ್ನು ಕಾಪಾಡಪ್ಪ ದ್ಯಾವರ' ಎಂದು ಬೇಡಿಕೊಳ್ಳೋಣ ಎಂದನಿಸಿತು ಸುನೀತಾಳಿಗೆ.

ಏತನ್ಮಧ್ಯೆ ಸವಿತಾ ತನ್ನಕ್ಕ ಅಮೃತಾಳಿಗೆ ವಿಡಿಯೋ ಕಾಲ್ ಮಾಡಿದ್ದಳು. ಅದರಲ್ಲಿ ತನ್ನ ತಂಗಿಯ ಅವಸ್ಥೆ ಕಂಡು ಅಮೃತಾ ಬೆಚ್ಚಿದಳು. ಆಕೆ ಕಣ್ಣುಗಳು ಆಳವಾದ